**ಓ ಎಸ್ ನಂಃ 455-14**
**ಪಿ ಡಬ್ಲ್ಯೂ ಃ 3**

**ದಿಃ 25.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಪಿ ವಕೀಲರಿಂದ**

11. ದಿಃ16.04.2008 ರ ಕ್ರಯಪತ್ರದ ನಕಲನ್ನು ಹಾಜರುಪಡಿಸಬಹುದಾ ಅಂದರೆ ನಾನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ಆ ದಿನ ಸಬ್ ರಿಜಿಸ್ಟರ್ ಕಚೇರಿಗೆ ಹೋಗಿದ್ದೆ, ಫೋಟೋ ಕೊಟ್ಟಿದ್ದೆ ಹಾಗೂ ಎಡಗೈ ಹೆಬ್ಬೆಟ್ಟು ಗುರುತು ಹಾಕಿದ್ದೆ ಅಂದರೆ ಸರಿಯಲ್ಲ. ಆ ಪತ್ರದಲ್ಲಿರುವ ಪೋಟೋ ನನ್ನದೇ ಅಂದರೆ ಪೋಟೋ ಇರಬಹುದು ಎಂದು ನುಡಿಯುತ್ತಾರೆ. ನಾನು ಹೆಬ್ಬೆಟ್ಟು ಗುರುತು ಹಾಕುವುದು ಅಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ 1 ನೇ ಪ್ರತಿವಾದಿ ಹಾಗೂ ನನ್ನ ತಮ್ಮ 12 ನೇ ಪ್ರತಿವಾದಿ ಹೆಬ್ಬೆಟ್ಟು ಗುರುತು ಹಾಕುತ್ತಾರಾ ಅಥವಾ ಸಹಿ ಮಾಡುತ್ತಾರಾ ಅಂದರೆ ನನಗೆ ಗೊತ್ತಿಲ್ಲ. ನನ್ನ ಮಕ್ಕಳಾದ 9 ಮತ್ತು 10 ನೇ ಪ್ರತಿವಾದಿಗಳು ಸಹಿ ಮಾಡುವುದು ಅಂದರೆ ಸರಿ. ನನ್ನ ಹೆಂಡತಿ 8 ನೇ ಪ್ರತಿವಾದಿ ಹೆಬ್ಬೆಟ್ಟು ಗುರುತು ಹಾಕುವುದು ಅಂದರೆ ಸಾಕ್ಷಿ ನಾನು ಅವರಲ್ಲಿ ಕೇಳಿಲ್ಲ ಎಂದು ನುಡಿಯುತ್ತಾರೆ.

12. ನಾನು ಮಾರಾಟ ಮಾಡಿದ್ದರೂ ಕೂಡಾ ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆ ರೀತಿ ಮಾರಾಟ ಮಾಡಿರುವ ಸ್ವತ್ತು ದಿಃ10.06.1987 ರಲ್ಲಿ ನಾನು, 1 ನೇ ಪ್ರತಿವಾದಿ ನನ್ನ ತಮ್ಮ ಹಾಗೂ ನನ್ನ ಅಣ್ಣ 12 ನೇ ಪ್ರತಿವಾದಿ ರವರು ನೋಂದಾಯಿತಿ ಅಲ್ಲದ ವಿಭಾಗ ಪತ್ರದ ಮೂಲಕ ನನಗೆ ಬಂದಿರುವುದು ಅಂದರೆ ಸರಿಯಲ್ಲ. ಸಾಕ್ಷಿಗೆ ಆ ವಿಭಾಗ ಪತ್ರವನ್ನು ತೋರಿಸಿದಾಗ ಅದರಲ್ಲಿರುವ ಹೆಬ್ಬೆಟ್ಟು ನನ್ನದಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಭಾಗಕ್ಕೆ ಬಂದು ಅದನ್ನು ಮಾರಾಟ ಮಾಡಿದ್ದರೂ ಕೂಡಾ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

13. ವಾದಿಗಳ ಜೊತೆ ನಾನು ಚೆನ್ನಾಗಿದ್ದೇನೆಂದರೆ ಸರಿಯಲ್ಲ. ವಾದಿಗಳು ನನ್ನ ಮೂಲಕ ಅವರ ವಕೀಲರ ಮೂಲಕ ಸುಳ್ಳು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿ 12 ರವರು ಅನ್ಯೋನ್ಯವಾಗಿದ್ದೇವೆ. ನಾನು ಮಾರಾಟ ಮಾಡಿದ ಮಾರನೆಯ ದಿವಸ 12 ನೇ ಪ್ರತಿವಾದಿ ಅವರ ಭಾಗಕ್ಕೆ ಬಂದ ಸ್ವತ್ತನ್ನು ಪ್ರತಿವಾದಿ 18 ರವರಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ಕ್ರಯಪತ್ರಕ್ಕೆ ಉಗ್ರನಾರಾಯಣರವರ ಮಗ ಲೋಕೇಶ್ ಮತ್ತು ಟಿ.ವಿ.ಗಂಗರಾಜು ರವರು ಸಾಕ್ಷಿ ಸಹಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. 12 ನೇ ಪ್ರತಿವಾದಿ ಹೆಬ್ಬೆಟ್ಟು ಗುರುತು

ಹಾಕುತ್ತಿದ್ದರು ಆ ಕ್ರಯಪತ್ರ ಬರೆದುಕೊಡುವ ಹೊತ್ತಿಗೆ ರುಜು ಮಾಡಲು ಕಲಿತು ಆ ಪತ್ರಕ್ಕೆ ರುಜು ಹಾಗೂ ಹೆಬ್ಬೆಟ್ಟು ಗುರುತು ಹಾಕಿದರು ಅಂದರೆ ನನಗೆ ಗೊತ್ತಿಲ್ಲ.

14. ಪ್ರತಿವಾದಿ 13 ರಿಂದ 15 ರವರು 12ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು. ಪ್ರತಿವಾದಿ 13 ರಿಂದ 15ರವರಲ್ಲಿ 13ನೇ ಪ್ರತಿವಾದಿ ಹೆಬ್ಬೆಟ್ಟು ಗುರುತು ಹಾಗೂ ಉಳಿದವರು ಆ ಪತ್ರಕ್ಕೆ ಸಹಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು ಬರೆದುಕೊಟ್ಟ ಕ್ರಯಪತ್ರಕ್ಕೆ ಸಂಜೀವಯ್ಯ ಹಾಗೂ ಕೆಂಪೇಗೌಡರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಭಾಗ ಮಾಡಿಕೊಂಡು ಸ್ವತ್ತುಗಳನ್ನು ಮಾರಾಟ ಮಾಡಿದ್ದರೂ ಕೂಡಾ 1ನೇ ಪ್ರತಿವಾದಿ ತೊಂದರೆ ಕೊಡಲು ವಾದಿಗಳ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಬ್ಬೆಟ್ಟು ಗುರುತನ್ನು ತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ನನ್ನ ಅಭ್ಯಂತರ ಇಲ್ಲ.

ಮರು ವಿಚಾರಣೆಃ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.